ಅಂಗಳದಾಗ ಹವೀಜು ಒಣ ಹಾಕ್ಕೊಂಡ್ ಕುಂತ ಪಾರಕ್ಕಗ ಇವತ್ತೆಲ್ಲ ಕಾಯೂದ ಕೆಲಸ. ಮಗಳು ಶಿವಮ್ಮನೂ ತನ್ನ ಕೈಗೂಸ ಎತಗೊಂಡ ನೆರೆಮನಿಗಿ ಹ್ವಾಗಿದ್ದಳು ಶಾವಿಗೆ ಹೊಸ್ಯಾಕಂತ. ಬ್ಯಾಸಗೀ ಬಂತಂದ್ರ ಸಾಕ ಈ ಊರಾಗ ದೊಡ್ಡ ಸಂಭ್ರಮಾನ ಇರ್ತಿತ್ತು. ಎಲ್ಲಾರ್ ಮನ್ಯಾಗೂ ದೊಡ್ಡಾವರು ಸಣ್ಣವ್ರು ಕುಂತ ಹರಟೀ ಹೊದ್ಕೋಂತ, ಮುದ್ಕ್ಯಾರ ಮಾತು ಚ್ಯಾಷ್ಟೀ ಕೇಳಿ ನಕ್ಕೋತ ಶ್ಯಾವಿಗಿ ಹೊಸಿಯೂದು, ಸೌತಿಬೀಜ ಕಟಿಯೂದು, ಪರಡಿ ಮಾಡೂದು, ಹಪ್ಪಳಾ ಶಾಂಡ್ಗಿ ಮಾಡೂದು, ಹೀಂಗ್ss ಒಬ್ಬ್ರಾದ್ರ ಇನ್ನೊಬ್ರದ ಅಂತ ಓಣ್ಯಾಗಿನ ಸಾಲ್ ಮನಿಯಾವ್ರು ಸರತಿಹಂಗ ಮಾಡ್ತಿದ್ರು. ಈಗಿನ ಕಾಲದಾಗ ಆ ಹುಕ್ಕೀ ಇಲ್ಲದಂಗ ಆಗೇದ. ಜ್ವಾಳದ ರೊಟ್ಟಿಯಿಂದ ಹಿಡ್ದು ಈಗ ಎಲ್ಲಾನೂ ಮಾರ್ಕೆಟ್ಟಿನಾಗ ಸಿಗೂವಾಗ ಮೈ ಮುರ್ದು ಹಿಟ್ಟು ಬ್ಯಾಳಿ ಸಾಮಾನು ಸರಂಜಾಮು ಜೋಡಿಸಿಕೊಂಡು ಇಂಥಾವೆಲ್ಲ ಮಾಡ್ಕೋಳ್ಳಾಕ ಯಾರಿಗೆ ಟೈಮೈತಿ?

ಎಲ್ಲಾಕ್ಕಿಂತ್ ಮುಖ್ಯ ಅಂದ್ರ ಪಾರಕ್ಕಗss ಇತ್ತಿತ್ತಲಾಗ ಇಂಥದ್ರಾಗ ಮನಸ್ಸ ಇಲ್ದಂಗ ಆಗೇತಿ. ಇಂಥದ್ರಾಗ್ಯಾಕ ಯಾವುದರಾಗೂ ಆಕೀಗೆ ಈಗ ಮನಸ್ಸಿಲ್ಲ. ಯಾವುದ್ರಾಗೂ ಸೊಗಸಿಲ್ಲ. ಸುಮ್ಮನ ಬದಕ್ಬೇಕು ಬದಕಾಕತ್ತೀನಿ ಅನ್ನೋ ಹಂಗ ಬದುಕಾಕತ್ತ್ಯಾಳ. ನೀ ನಂಗರss ಬೇಕ ಬೇಕು ಪಾರಮ್ಮ ಅಂತಾ ಹೇಳೂ ಜೀವಕ್ಕ ಜೀಂವಾ ಇಟ್ಕೊಂಡ್ ಕುಂತ್ಯಾಳ. ತನ್ನ ಬದಕಂತೂ ಹಿಂಗಾತು ತನ್ನ ಮಗಳದರ ನೆಟ್ಟಗಾತss? ಅದೂ ಇಲ್ಲ. ಶಿವಮ್ಮನ್ನ ತನ್ನ ತೌರ ಮನೀ ನೆಂಟಸ್ತಿಕ್ಯಾಗ ಮದವಿಮಾಡಿ ಕೊಟ್ಟರೂ ಶಿವಮ್ಮ ಗಂಡನಕೂಡ ಚೆಂದಾಗಿ ಬಾಳೇ ಮಾಡಿಕೊಂಡಿರಲಾರದ ಅಕೀನೂ ತೌರಿನ್ಯಾಗ ಬಂದ ಕುಂತ್ಯಾಳು. ಕಾರಣ ಅಂವಗ ಅಕೀ ಬ್ಯಾಡಂತ! ಯಾರರ ಕೇಳಿದ್ರ ಏನ್ ಅನ್ನೋಬೇಕ? ಯಾಕ ಹಿಂಗಾತೋ ಏನೋ ? ಎಲ್ಲಾ ಚಲೋನ ಐತಿ ಅಂದ್ಕೊಂಡು ಮದ್ವೀ ಮಾಡಿದ್ರ ಈ ಕಥಿ ಆತು. ಮದ್ವಿ ಏನ್ ಸುಮ್ನ ಆತ, ನಾಲ್ಕ್ ಮಂದೀ ಹೌದ್ ಅನ್ನೂಹಂಗ ವಾಲಗಾ ಊದಿಸಿ ಮೋತಿಚೂರಿನ ಉಂಡಿ, ಗೋದಿಹುಗ್ಗಿ ಹಾಕಿಸಿ, ಇದ್ದಬಿದ್ದ ದಾಗೀನಾ ಹಾಕಿಕೊಟ್ಟ ಗೆದ್ವಿಯಪ್ಪಾ ಅಂದ್ರ ಹೀಂಗಾತಂದ್ರ ಏನ ಅರ್ಥ ಐತಿ? ನೆಪ್ಪಾದ್ರ ಪಾರವ್ವನ್ ಎದ್ಯಾಗ ಚಿಟಕ್ ಮುಳ್ಳು ಆಡಿದಂಗಾಕ್ಕೈತಿ.

ಅಕೀಗss ಅಂವಾ ಬ್ಯಾಡ ಅನಿಸಿದ್ರ ಪಾರಕ್ಕ ಮಗಳಿಗೆ ಕುಂಡ್ರಿಸಿ ಬುದ್ಧೀ ಹೇಳತಿದ್ಲು. ಅಕೀ ಮನಸ್ಸು ತಿದ್ದೂಹಂಗ ಮಾಡ್ತಿದ್ಲು. ಆದ್ರ ಇದು ಹಂಗಲ್ಲ. ಶಿವಮ್ಮ ಕಟ್ಟಿಕೊಂಡಾಂವಗ ಬ್ಯಾಡಂತ. ನಾಕ ಮಂದೀ ಕರಿಸಿ ಇಚಾರಿಸೂಣೇನು? ಅಂದ್ರ ಶಿವಮ್ಮನ ಬೇಡವ್ವಾ ಒಲ್ಲೆ, ಎಂದುಬಿಟ್ಟಳು.

“ಯವ್ವಾಬೇ ನೀನೇನ್ ಕಡಿಮಿ ಕಷ್ಟಪಟ್ಟೀ? ಇಷ್ಟ ದಿನಾ ಹ್ಯಾಂಗ ಬದ್ಕೀ ಗೊತ್ತಿಲ್ಲಾ ನಂಗss? ನಿನ್ನ ಜತಿ ಹೊಲಗದ್ದ್ಯಾಗ ದುಡಿದಾದರೂ ಬದಕತೀನಿ. ನೀನೂ ಬ್ಯಾಡ ಅಂದ್ರ ನಾ ಕೇರಿನೋ ಭಾವಿನೋ ನೋಡ್ಕೋತೀನಬೇ...’’ ಎಂದಾಗ ಪಾರವ್ವನ ಕಳ್ಳು ಚುರಕ್ ಅಂದು ಮಗಳನ್ನು ಅಪ್ಪಿಕೊಂಡಿದ್ದಳು.

“ಯವ್ವಾ ಬಂಗಾರೀ, ನೀ ಹಿಂಗ್ಯಾಕ್ ಅಂತೀಬೇss... ಆ ಭಾಡ್ಯಾಗ್ ನೀ ಯಾಕ್ ಬ್ಯಾಡಂತ, ಅದಾದ್ರೂ ಹೇಳು... ಅವ್ನ ಬಾಯಾಗ್ ಯಕ್ಕಡಾ ತುರುಕಿ ಒದ್ದ ಕೇಳ್ತೀನಿ, ಹೇಂತಿ ಬ್ಯಾಡಾಗಿದ್ರ ಮತ್ತ್ಯಾಕ್ ಬಸರ್ ಮಾಡಿದ್ನಂತ ಹಲ್ಕಾ ಮಾನಗೇಡಿ ತಂದು” ಅಂತಂದು... ಪಾರವ್ವ ಸಂಕ್ಟಾಪಟ್ಟಿದ್ಲು.

ಇಕಿಯರ ಅಂವ್ನೊಬ್ಬಗ ಬ್ಯಾಡಾದ್ಲು, ತಾನು! ತಾನು ಎಲ್ಲಾಗರ್ೂ ಬ್ಯಾಡಾಗಿಹೋದೆ ಒಂದss ಒಂದ ಸಣ್ಣ ತೆಪ್ಪಿಂದ. ಆ ಮುದಕಿ ಸಾಯೂಮಟಾನೂ ತನ್ನ ಹೊಟ್ಟ್ಯಾಗ ಹುಟ್ಟಿದ ಮಕ್ಕಳನ್ನೂ ದೂರ್ ಇಟ್ಟು ಹಾದರಗಿತ್ತಿ. ಯಾ ಅಪರಾಧಾ ಮಾಡಿದ್ನೋ ನಾ. ಅಕೀ ಎನೋ ಮಹಾ